ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಾಲಯದ ಕಳೆದ 4 ವರ್ಷಗಳಿಂದ ಬಂದ ಆದಾಯ ಮತ್ತು ವೆಚ್ಚಗಳ ವಿವರ

ಕ್ರ ಸಂ	ವರ್ಷ	ಆದಾಯ	ವೆಚ್ಚ
1)	95-96	2,66,96,510	1,72,98,591
2)	96-97	3,32,18,863	1,82,23,346
3)	97-98	3,50,03,988	2,39,25,491
4)	98-99	3,31,35,752	2,94,37,111

ಬೆಂಗಳೂರು ನಗರದ (ಆರ್.ಪಿ.ಸಿ.ಲೇಔಟ್) ಇರುವ ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕಿನ್ನು ಸಾಲ ಸೌಲಭ್ಯ

1203 (1422) ಶ್ರೀ ಸಂಪಂಗಿ ಎನ್. (ಬಾಗೇಪಲ್ಲಿ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ಬೆಂಗಳೂರು ನಗರದ ವಿಜಯನಗರ 2ನೇ ಹಂತದಲ್ಲಿ (ಆರ್.ಪಿ.ಸಿ ಲೇಔಟ್) ಇರುವ ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ ನಿಯಮಿತದಲ್ಲಿ ಸಾಲ ಮಂಜೂರಾತಿ ಮಾಡುವ ಸಂದರ್ಭದಲ್ಲಿ ಅಕ್ರಮ ವ್ಯವಹಾರಗಳು ನಡೆಯುತ್ತಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ ?

2) ಸದರಿ ಅಕ್ರಮದಲ್ಲಿ ಪರೋಕ್ಷವಾಗಿ ಬ್ಯಾಂಕಿನ ಸಿಬ್ಬಂದಿ ಹಾಗೂ ಪದಾಧಿಕಾರಿಗಳು ಒಳಗಾಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಏನಾದರೂ ಬಂದಿದೆಯೇ?

3) ಸಾಲ ಮಂಜೂರಾತಿ ಮಾಡುವ ಸಂದರ್ಭದಲ್ಲಿ ಪರೋಕ್ಷವಾಗಿ ಜಾತಿಯನ್ನು ಸಹ ಪರಿಗಣನೆ ಮಾಡಿರುವ ಬಗ್ಗೆ ದೂರಗಳನ್ನು ಸರ್ಕಾರಕ್ಕೆ ಬಂದಿದೆಯೇ?

4) ಇದಾಗಿದ್ದಲ್ಲಿ ಈ ದಿಶೆಯಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳು ಏನು?

ಶ್ರೀ ಡಿ.ಕೆ ಶಿವಕುಮಾರ್ (ಸಹಕಾರ ಸಚಿವರು) :

1) ಇಲ್ಲ

2) ಉದ್ಭವಿಸುವುದಿಲ್ಲ

3) ಇಲ್ಲ

4) ಉದ್ಭವಿಸುವುದಿಲ್ಲ